<u>ಸಾಕ್ಷಿಯನ್ನು ದಿನಾಂಕ **31-01-2024** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

<u>ಪಾಟಿ ಸವಾಲು 2 ನೇ ಎದುರುದಾರ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದ ಃ</u>

ನಮ್ಮ ನಿವೇಶನ ಸಂಖ್ಯೆಃ 61 ಇರುತ್ತದೆ. ಇದು ವಸತಿ ನಿವೇಶನ ಎಂದರೆ ಸರಿ. ನಾನು ಎಲ್. ಗಂಗಾಧರ ಪಿ. ಡಬ್ಲೂ-3 ಇವರಿಂದ ಖರೀದಿ ಮಾಡಿದ್ದೇನೆ. ನನ್ನ ನಿವೇಶನವನ್ನು ಖರೀದಿ ಸಂಖ್ಯೆಃ 3854/11-12 ಅಂತ ಇದೆ ಎಂದರೆ ಸರಿ. ಸನ್ 2002 ರಲ್ಲಿ ನಾನು ನಿವೇಶನವನ್ನು ಖರೀದಿ ಮಾಡಿದ್ದೇನೆ. ನನ್ನ ರೆಫರೆನ್ಸ್ ಅರ್ಜಿಯಲ್ಲಿ ದಿಃ21-10-2011 ರಂದು ಖರೀದಿ ಮಾಡಿದ್ದೇನೆ ಎಂದು ಬರೆಸಿದ್ದೇನೆ ಎಂದರೆ ಸರಿಯಲ್ಲ. ಈ ಕ್ರಯಪತ್ರದಂತೆ 2002 ರಲ್ಲಿ ಖರೀದಿ ಮಾಡಿ 2011 ರಲ್ಲಿ ನೊಂದಣಿ ಮಾಡಿಸಿದ್ದೇನೆ. ಆ ಕ್ರಯಪತ್ರ ಹಾಜರುಪಡಿಸಿದ್ದೇನೆ. ನಾನಾ ನ್ಯಾಯಾಲಯದ ಮುಂದೆ ಖರೀದಿ ಪತ್ರವನ್ನು ಹಾಜರುಮಾಡಿಲ್ಲ.

ನನಗೆ ತೋರಿದ ಖರೀದಿ ಪತ್ರ ನನ್ನ ನಿವೇಶನಕ್ಕೆ ಸಂಬಂಧಪಟ್ಟದ್ದು ಎಂದರೆ ಸರಿ. ಸದರಿ ಖರೀದಿ ಪತ್ರದ ದೃಡೀಕೃತ ಪ್ರತಿಯನ್ನು **<u>ನಿಆರ್-1 ಎಂದು ಗುರುತಿಸಲಾಯಿತು.</u>** ನಿಪಿ-15 ರೆಫರೆನ್ಸ್ ಅರ್ಜಿಯ 2 ನೇ ನುಡಿಗಟ್ಟಿನಲ್ಲಿ ಮತ್ತು ನಿಆರ್-1 ಕ್ರಯಪತ್ರದಲ್ಲಿ ತೋರಿದ ಚೆಕ್ಕುಬಂದಿಗಳು ಒಂದೇ ಎಂದರೆ ಸರಿ. ನನ್ನ ಕ್ರಯಪತ್ರ ಮತ್ತು ರೆಫರೆನ್ಸ್ ಅರ್ಜಿಯಲ್ಲಿನ ಚೆಕ್ಕುಬಂದಿ ನನ್ನ ಮುಖ್ಯ ಹೇಳಿಕೆಯಲ್ಲಿ ಹೇಳಿರುವ ಚೆಕ್ಕುಬಂದಿ ಬೇರೆ ಬೇರೆ ಇದೆ ಎಂದರೆ ಸರಿಯಲ್ಲ, ಆದರೆ ಈ ದಾಖಲಾತಿಗಳನ್ನು ಪರಶೀಲಿಸಿದಾಗ ಚೆಕ್ಕುಬಂದಿಗಳಲ್ಲಿ ವ್ಯತ್ಯಾಸ ಇರುವುದು ಕಂಡುಬರುತ್ತದೆ. ನನ್ನ ಮುಖ್ಯ ಹೇಳಿಕೆಯಲ್ಲಿ ಹೇಳಿದಂತೆ ನಮ್ಮ ನಿವೇಶನದ ಸುತ್ತ ಮುತ್ತ ಗುಲ್ಬರ್ಗ, ಹುಬ್ಬಳ್ಳಿ, ಬಳ್ಳಾರಿ, ಲಿಂಗಸೂರು, ಹೈದ್ರಾಬಾದ್, ಮೆಹೆಬೂಬನಗರ ಬರುತ್ತದೆ ಅಂತ ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ. ಆ ಬಗ್ಗೆ ದಾಖಲಾತಿ ಇಲ್ಲ. ನಿಆರ್-1 ರಲ್ಲಿ ಖರೀದಿ ಬೆಲೆ ರೂ. 60 ಸಾವಿರ ಇದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ರೂ. 6 ಲಕ್ಷಕ್ಕೆ ಖರೀದಿ ಮಾಡಿದ್ದೇನೆ, ಸರಕಾರ ಬೆಲೆ ರೂ. 60 ಸಾವಿರ ಅಂತ ಕ್ರಯಪತ್ರದಲ್ಲಿ ಬರೆಸಿದ್ದೇನೆ ಅಂತ ನುಡಿಯುತ್ತಾರೆ. ರೂ. 6 ಲಕ್ಷ ಕ್ರಯಪತ್ರದಲ್ಲಿ ತೋರಿಸಿಲ್ಲ ಎಂದರೆ ಸರಿ.

ನಿಪಿ-20 ರಂತೆ ಪಿ. ಡಬ್ಲೂ-3 ಎಲ್. ಗಂಗಾಧರ ರಾವ್ ಇವರು ಶ್ರೀಕಾಂತ ಗೋವೇಕರ್ ಇವರಿಗೆ ಮಾರಾಟ ಮಾಡಿದ ಕ್ರಯಪತ್ರ ಹಾಜರುಪಡಿಸಿದ್ದೇನೆ ಎಂದರೆ ಸರಿ. ಈ ನಿವೇಶನ ಸಂಖ್ಯೆಃ 66 ಎಂದರೆ ಸರಿ. ನನ್ನ ನಿವೇಶನ ಮತ್ತು ಈ ನಿವೇಶನ 2002 ರಲ್ಲಿ ಖರೀದಿ ಆಗಿದೆ. ನಿಪಿ-20 ಪುಟ ಸಂಖ್ಯೆಃ 9 ರಲ್ಲಿ " ಸದರಿ ಪ್ಲಾಟು ನಗರದಿಂದ ಸುಮಾರು ದೂರದಲ್ಲಿದೆ. ಇದಕ್ಕೆ ನಗರಸಭೆಯಿಂದ ಯಾವುದೇ ಅಭಿವೃದ್ಧಿ ಕೆಲಸಗಳು ಆಗಿರುವುದಿಲ್ಲ. ಆದ್ದರಿಂದ ಸದರಿ ಪ್ಲಾಟಿನ ಮಾರ್ಕೇಟ್ ಬೆಲೆ ರೂ. 60 ಸಾವಿರ ಇರುತ್ತದೆ" ಎಂದು ಬರೆಸಿದ್ದು, ಆ ಪ್ರಕಾರ ನನ್ನ ನಿವೇಶನ ದೂರದಲ್ಲಿದೆ ಎಂದರೆ ಸಾಕ್ಷಿ ನನ್ನ ನಿವೇಶನ ಗಂಗಾವತಿ ನಗರದಿಂದ 500 ಮೀ. ದೂರದಲ್ಲಿದೆ ಅಂತ ನುಡಿಯುತ್ತಾರೆ. ಈ ದೂರವನ್ನು ತೋರಿಸಲು ನಾನು ಯಾವುದೇ ದಾಖಲಾತಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಮೌನವಾಗಿರುತ್ತಾರೆ. ನನ್ನ ಮುಖ್ಯ ಪರೀಕ್ಷೆಯಲ್ಲಿ ಹೇಳಿದ ಸಂಗತಿಗಳು ಮತ್ತು ನನ್ನ ರೆಫರೆನ್ಸ್ ಅರ್ಜಿಯಲ್ಲಿ ಹೇಳಿದ ಸಂಗತಿಗಳು ಒಂದಕ್ಕೊಂದು ತಾಳೆಯಾಗುವುದಿಲ್ಲ ಎಂದರೆ ಸರಿಯಲ್ಲ. ರೈಲ್ವೇ ಹಳಿಯ ಸಲುವಾಗಿ 4(1) ನೋಟಿಫಿಕೇಷನ್ 2009 ರಲ್ಲಿ ಆಗಿದೆ ಎಂದರೆ ಸಾಕ್ಷಿ 2012 ರಲ್ಲಿ ಆಗಿದೆ ಎಂದು ನುಡಿಯುತ್ತಾರೆ. ನೋಟಿಫಿಕೇಷನ್ 2009 ರಲ್ಲಿ ಆಗಿದೆ ಎಂದರೆ ಸರಿ. ದಿಃ 13-07-2009 ರಲ್ಲಿ ಆಗಿದೆ ಎಂದರೆ ಸರಿ. 2009 ರಲ್ಲಿ ಭೂಸ್ವಾಧೀನ ಆಗಿದ್ದರೂ ಸಹ ಹೆಚ್ಚಿನ ಪರಿಹಾರದ ಸಲುವಾಗಿ 2011 ರಲ್ಲಿ ಕ್ರಯಪತ್ರ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಕ್ರಯಪತ್ರ ನೊಂದಣಿ ಆದಾಗ ಭೂಸ್ವಾಧೀನ ಆಗಿತ್ತು ಎಂದರೆ ಸರಿಯಲ್ಲ, 2012 ರಲ್ಲಿ ಸ್ವಾಧೀನ ಆಗಿದೆ. 2012 ರಲ್ಲಿಯೂ ಸ್ವಾಧೀನ ಆಗಿರುವುದು ಗೊತ್ತಿಲ್ಲ. 2009-10 ರಲ್ಲಿ ಭೂಸ್ವಾಧೀನ ಆಗಿರುವ ವಿಚಾರ ಗೊತ್ತಿದ್ದರೂ ಸಹ ಕಾಲಮಿತಿಯಲ್ಲಿ ಬರಲು ನಿಪಿ-45 12(2) ನೋಟಿಫಿಕೇಷನ್ ಅನ್ನು ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ನಿಪಿ-6 ರ ವಸತಿ ವಿನ್ಯಾಸದ ಪ್ರತಿಯನ್ನು ಹಾಜರುಪಡಿಸಿಲ್ಲ. ನಿಪಿ-9 ರಿಂದ 14 ಮತ್ತು 56 ಎ ಪಿ ಎಂ ಸಿ ಗೆ ಸಂಬಂಧಪಟ್ಟದ್ದು ಎಂದರೆ ಸರಿ. ನಿಪಿ-16 ರಿಂದ 18 ರಿಲೈಯನ್ಸ್ ಕಂಪನಿಗೆ ಸಂಬಂಧಪಟ್ಟದ್ದು ಎಂದರೆ ಸರಿ. ಆ ಕ್ರಯಪತ್ರ ಆಗುವಾಗ ನಾನು ಇಲ್ಲ. ನಿಪಿ-16 ರಿಂದ 18 ಕ್ರಯಪತ್ರಗಳ ಚೆಕ್ಕುಬಂದಿಯಲ್ಲಿ ನಮ್ಮ ನಿವೇಶನ ಇಲ್ಲ. ನಿಪಿ-19 ಮತ್ತು 50 ತೀರ್ಪುಗಳು ಬೇರೆ

ಪ್ರಕರಣಗಳದ್ದು, ನಮಗೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನದು ಯಾವ ಬೀನ್ ಶೇತ್ಕಿ ಜಮೀನಿನಲ್ಲಿ ನಿವೇಶನ ಬರುತ್ತದೆ ಎನ್ನುವುದು ಗೊತ್ತಿಲ್ಲ. ಋಷಮಣಿ ನಗರದಲ್ಲಿ 70 ನಿವೇಶನಗಳು ಇವೆ. ಋಷಮಣಿ ನಗರಕ್ಕೆ ರಸ್ತೆ, ಚರಂಡಿ, ನೀರು, ವಿದ್ಯುಚ್ಛಕ್ತಿ ವ್ಯವಸ್ಥೆ ಇದೆ ಅಂತ ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಮಾಹಿತಿ ನೀಡಿ, ಸುಳ್ಳು ರೆಫರೆನ್ಸ್ ಅರ್ಜಿ ಹಾಗೂ ಸಾಕ್ಷಿ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-52 ರಿಂದ 55 ಭೂಸ್ವಾಧೀನ ನಂತರದ ದಾಖಲಾತಿಗಳಲ್ಲಿ ಋಷಮಣಿ ನಗರ, ಗಂಗಾಧರ ಕಾಲೋನಿ, ಶರಣಬಸವೇಶ್ವರ ನಗರ ಅಂತ ಇವುಗಳಲ್ಲಿ ಬರೆದಿಲ್ಲ, ನಾನು ಕೊಟ್ಟ ದಾಖಲಾತಿಗಳಲ್ಲಿ ಇದೆ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಶ್ರೀ. ರಮೇಶ ಎಸ್ ಗಾಣಿಗೇರ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.